ಇಲಾಖಾ ವಿಚಾರಣೆ ನಡೆಸಲು ಸರ್ಕಾರವು ಅಡಿಷನಲ್ ರಿಜಿಸ್ಟ್ರಾರ್ ಆಫ್ ಎನ್‌ಕ್ವೈರೀಸ್, ಕರ್ನಾಟಕ ಲೋಕಾಯುಕ್ತ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿದೆ.

ಸ್ವರ್ಣ ಭಾರತಿ ಸಹಕಾರಿ ಬ್ಯಾಂಕ್ ಕೆ.ಆರ್. ರೋಡ್, ಬೆಂಗಳೂರು ಇಲ್ಲಿನ ಅವ್ಯವಹಾರಗಳು

4861 - ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಸ್ವರ್ಣಭಾರತಿ ಸಹಕಾರ ಬ್ಯಾಂಕ್ ನಿ, ಕೆ.ಆರ್.ರಸ್ತೆ, ಬೆಂಗಳೂರು ಇಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*
2. *ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?*
3. *ಬೋರ್ಡ್ ನಡವಳಿಗಳನ್ನು ತಪ್ಪಾಗಿ ದಾಖಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*
4. *ಈ ಬಗ್ಗೆ ಸರ್ಕಾರದ ಕ್ರಮಗಳೇನು?*

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

1. ಬಂದಿರುವುದಿಲ್ಲ.
2. ಉದ್ಭವಿಸುವುದಿಲ್ಲ.
3. ಬಂದಿರುವುದಿಲ್ಲ.
4. ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ರೈತ ಬಜಾರ್ ಪ್ರಾರಂಭಿಸುವುದು

4863 - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಮಾರುಕಟ್ಟೆಯವರು ರೈತ ಬಜಾರ್‌ಗಳನ್ನು ಯಾವ ಯಾವ ಸ್ಥಳಗಳಲ್ಲಿ ಪ್ರಾರಂಭಿಸಲಾಗುವುದು ವಿವರ ನೀಡುವುದು?*

ಆ) *ಈ ರೈತ ಬಜಾರ್‌ದ ಮುಖ್ಯ ಉದ್ದೇಶಗಳೇನು? ಹಾಗೂ ಇದರಿಂದ ರೈತರಿಗೆ ಆಗುವ ಪ್ರಯೋಜನಗಳೇನು?*

ಇ) *ರಾಜ್ಯದಲ್ಲಿ ಈಗಾಗಲೇ ಪ್ರತಿಯೊಂದು ತಾಲ್ಲೂಕಿನಲ್ಲಿ ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಯು ಇದ್ದು, ಇವುಗಳನ್ನು ಬಲಪಡಿಸಿದಲ್ಲಿ ರೈತರಿಗೆ ಅನುಕೂಲವಾಗುವುದಿಲ್ಲವೇ?*

ಶ್ರೀ ಆರ್.ಬಿ. ತಿಮ್ಮಾಪುರ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ರೈತರ ಸಂತೆಗಳನ್ನು ಬೆಂಗಳೂರು ಹಾಗೂ ಹುಬ್ಬಳ್ಳಿಯಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಆ) ರೈತರು ತಾವು ಬೆಳೆದ ಹಣ್ಣು ಮತ್ತು ತರಕಾರಿಗಳನ್ನು ಮಧ್ಯವರ್ತಿಗಳಿಲ್ಲದೆ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವರು ಮತ್ತು ಬೇಡಿಕೆ ಹಾಗೂ ಪೂರೈಕೆಯನ್ನು ಆಧರಿಸಿ ರೈತರನ್ನೊಳಗೊಂಡ ಸಮಿತಿಯು ಬೆಲೆಯನ್ನು ನಿರ್ಧರಿಸಲಾಗುವುದು. ರೈತರು ಮತ್ತು ಗ್ರಾಹಕರ ನೇರ ಮಾರಾಟ ಸಂಪರ್ಕ ಇರುತ್ತದೆ.

ಇ) ಅನುಕೂಲವಾಗುತ್ತದೆ.

ಬೈಲಹೊಂಗಲ ನಗರದ ಹೌಸಿಂಗ್ ಬೋರ್ಡ್ ಮನೆಗಳು

4864 - ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಬೈಲಹೊಂಗಲ ನಗರದಲ್ಲಿ ಮನೆ ಕಟ್ಟುವ ಸಲುವಾಗಿ ಹೌಸಿಂಗ್ ಬೋರ್ಡಿನವರು ಈ ಹಿಂದೆ ಅರ್ಜಿ ಕರೆದಿದ್ದ ಸಂಗತಿ ನಿಜವೇ ಹಾಗಿದ್ದಲ್ಲಿ ಈ ಅರ್ಜಿಯನ್ನು ಎಂದು ಕರೆಯಲಾಗಿತ್ತು? ಮತ್ತು ಅದರ ಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳಲಾಗಿದೆ?

ಆ) ಬೈಲಹೊಂಗಲ ನಗರದಲ್ಲಿ ಸರ್ಕಾರಿ ಜಮೀನು ಲಭ್ಯವಿಲ್ಲದಿರುವ ಸಂಗತಿ ನಿಜವೇ?

ಇ) ಹಾಗಿದ್ದಲ್ಲಿ ಖಾಸಗಿಯವರು ಜಮೀನು ಕೊಡಲು ಮುಂದೆ ಬಂದರೂ ಸಹ ಹೌಸಿಂಗ್ ಬೋರ್ಡಿನವರು ಅತಿ ಕಡಿಮೆ ಬೆಲೆಗೆ ಜಮೀನನ್ನು ಕೇಳುತ್ತಿರುವುದರಿಂದ ಯಾರೂ ಜಮೀನು ಕೊಡಲು ಸಿದ್ದರಿಲ್ಲದಿರುವ ಸಂಗತಿ ನಿಜವೇ?

ಈ) ಹಾಗಿದ್ದಲ್ಲಿ ಮಾರ್ಕೆಟ್ ರೇಟ್ ಪ್ರಕಾರ ಜಮೀನು ಖರೀದಿ ಮಾಡಿ ಮನೆ ಕಟ್ಟಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ನಗರದಲ್ಲಿ ಮನೆ ಕಟ್ಟುವ ಸಲುವಾಗಿ ಹೌಸಿಂಗ್ ಬೋರ್ಡಿನಿಂದ 1989ರಲ್ಲಿ ಬೇಡಿಕೆ ಸಮೀಕ್ಷೆಯಡಿ ಅರ್ಜಿ ಕರೆದಿದ್ದು ನಿಜ. ವಿವಿಧ ವರಮಾನದ ವರ್ಗಗಳ ಸಾರ್ವಜನಿಕರಿಂದ ಒಟ್ಟು 65 ಅರ್ಜಿಗಳು ಸ್ವೀಕೃತವಾಗಿವೆ. ಆದರೆ ಜಮೀನು ಲಭ್ಯವಿಲ್ಲದ ಕಾರಣ ಇಲ್ಲಿಯವರೆಗೆ ವಸತಿ ಯೋಜನೆಯನ್ನು ಕೈಗೊಂಡಿಲ್ಲ.

ಆ) ನಿಜ.

ಇ) ಅತಿ ದುಬಾರಿ ಬೆಲೆಗೆ ಜಮೀನು ಕೊಂಡಲ್ಲಿ ಯೋಜನೆ ನಿರ್ವಹಣೆ ಸಾಧ್ಯವಾಗುವುದಿಲ್ಲ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾ ಖರೀದಿ ಸಮಿತಿಯ ಸಭೆಯ ಶಿಫಾರಸ್ಸಿನಂತೆ ಬೆಲೆ ನಿಗಧಿಪಡಿಸಿ ಜಮೀನು ಖರೀದಿಸಲು ಕ್ರಮ ಕೈಗೊಳ್ಳಲಾಗುವುದು.